ಇದೇನಾ? ಸುಜಾತಳಿಗೆ ದುಃಖ ಉಕ್ಕಿ ಬಂತು. ಅವಳು ಮದುವೆಯಾಗಿ ಹೋದ ಹೊಸತರಲ್ಲಿ ಬಹಳವಾಗಿ ಕಾಡಿದ್ದಳು. ನಂತರ ಉದ್ಯೋಗದ ಬೇಟೆ ಹೊಸ ನೌಕರಿ ಹೊಸ ಕಾಲೇಜಿನಲ್ಲಿ ಅಸ್ಮಿತೆಯ ಪ್ರಶ್ನೆ. ಹಾಗಾಗಿ ಹೋಗುವ ಮುನ್ನ ತಯಾರಿ, ಇವುಗಳ ನಡುವೆ ಮೆಹರ್ ವಿಷಯ ಸ್ವಲ್ಪ ಮರೆತಂತಾಗಿತ್ತು.

'ಯಾಕೆ ಪುಟ್ಟಿ ಏನೋ ತುಂಬಾ ಯೋಚೆಯಲ್ಲಿದ್ದೀಯ? ಇವತ್ತು ಕ್ಲಾಸುಗಳು ಸರಿಯಾಗಿ ನಡೆಯಿತು ತಾನೇ?'

ಅಪ್ಪನ ವಾತ್ಸಲ್ಯದ ನುಡಿಗಳಿಗೂ ಸ್ಪಂದಿಸದೆ ಗರ ಬಡಿದಂತೆ ಕುಳಿತಿದ್ದಳು. ಹುಡುಗರು ಬಹುಶಃ ಕ್ಲಾಸಿನಲ್ಲಿ ತಲೆಹರಟೆ ಮಾಡಿರಬಹುದು ಅಥವಾ ಹೆಚ್‌ಓಡಿ ಏನಾದರೂ ಹೇಳಿರಬಹುದು ಎನ್ನುವುದು ಅವರ ತರ್ಕವಾಯಿತೇ ಹೊರತು ಅವರಿಗೆ ಅವಳ ಬೇಸರದ ಹಿಂದಿರುವ ನಿಚ್ಚಳವಾದ ಕಾರಣ ಗೊತ್ತಾಗಲಿಲ್ಲ.

'ಛೀ ನಾನೆಂತ ದಡ್ಡಿ. ಅವಳನ್ನು ಹಿಂಬಾಲಿಸಿದ್ದರೆ ಬಹುಶಃ ಅವಳು ಎಲ್ಲಿಗೆ ಹೋಗುತ್ತಿದ್ದಾಳೆ ಎನ್ನುವುದು ತಿಳಿಯುತ್ತಿತ್ತು. ' ಸುಜಾತ ಕೈ ಕೈ ಹಿಸುಕಿಕೊಂಡಳು.

'ಪುಟ್ಟಿ ನಾಳೆ ಸಂಜೆ ವೃದ್ಧಾಶ್ರಮಕ್ಕೆ ಹೋಗುತ್ತಿದ್ದೇನೆ. ನೀನು ಬರುತ್ತೀಯಾ ತಾನೇ..?' ಅಪ್ಪನ ಮಾತೂ ಪಾತಾಳದಲ್ಲಿತ್ತು.

ಅವಳ ತಲೆಯಿಂದ ಮೆಹರ್ ವಿಷಯ ಜಗ್ರೆಂದು ಇಳಿದು ನಾಳೆ ನಡೆಯಬೇಕಿರುವ ಕಾರ್ಯದತ್ತ ಗಮನ ಹರಿಯಿತು. ಅಪ್ಪ-ಅಮ್ಮನ ಮಮತೆಯ ಬೆಚ್ಚನೆಯ ಸುಖವನ್ನು ಪೂರ್ತಿ ಅನುಭವಿಸುವ ಮುನ್ನವೇ ಅಮ್ಮ ಈ ಭದ್ರಕೋಟೆಯನ್ನು ಒಡೆದು ಅಲ್ಲಿಂದ ಬಾರದ ಲೋಕಕ್ಕೆ ಹೋಗಿ ಎರಡು ವರ್ಷಗಳಾಗಿತ್ತು. ವೃದ್ಧಾಶ್ರಮದಲ್ಲಿ ಅವರಿಗೆ ಊಟ ಮಾಡಿಸಿ ಚಿಕ್ಕ ಉಡುಗೊರೆ ಕೊಡುವುದು ಅಪ್ಪ ಮಗಳಿಗೆ ಸರಿ ಎನಿಸಿತ್ತು. ತಿನ್ನಲಾರದವರಿಗೆ ಹೊಟ್ಟೆ ಬಿರಿಯುವವರೆಗೂ ತಿನ್ನಿಸುವ ಬದಲು ಆ ತಾಯಂದಿರ ಮುಖದಲ್ಲಿನ ನಗು ಎಷ್ಟೋ ನೆಮ್ಮದಿಯನ್ನು ತಂದುಕೊಟ್ಟಿತ್ತು.

'ಅದನ್ನ ತಪ್ಪಿಸೋಕಾಗುತ್ತಾ ಅಪ್ಪಾ? ಖಂಡಿತಾ ಹೋಗೋಣಾ. ಎಲ್ಲ ಸಾಮಾನು ತಂದಾಗಿದೆ. ಅವರಿಗೆ ಬೆಳಿಗ್ಗೆ ಒಂದು ಮಾತು ತಿಳಿಸಿ ಬಿಡುತ್ತೇನೆ.'

ಸುಜಾತ ತನ್ನ ಗಮನವನ್ನು ಬೇರೆಡೆ ತಿರುಗಿಸಿಕೊಳ್ಳುವ ವ್ಯರ್ಥ ಪ್ರಯತ್ನ ಮಾಡಿದಳು. ಒಂದುವೇಳೆ ಅವಳು ಮೆಹರ್ ಆಗಿದ್ದರೂ ಅವಳು ಗುರುತೇ ಹಿಡಿಯಲಿಲ್ಲಾ ಎಂದ ಮೇಲೆ ತಾನೇಕೆ ಅಷ್ಟೊಂದು ಅವಳ ಬಗ್ಗೆ ಯೋಚಿಸಬೇಕು? ಅಥವಾ ಅವಳು ಹೇಳಿದಂತೆ ಮೆಹರ್‌ಳನ್ನು ಹೋಲುವ ಮಾನಸ ಅವಳಾಗಿರಬಹುದು. ಮಾನಸ ತನಗೆ ಅಪರಿಚಿತಳು. ಯೋಚಿಸಿದಷ್ಟೂ ಅವಳ ತಲೆ ಸಿಡಿಯುತ್ತಿತ್ತು. ಸುಜಾತಾ ತಾನು ತಂದಿಟ್ಟಿರುವ ಸಾಮಾನುಗಳು ಸರಿ ಇದೆಯೇ ಎಂದು ಪರೀಕ್ಷಿಸಿದಳು..ಸೀರೆ, ರವಿಕೆ ಖಣ, ಬೆಡ್ ಶೀಟ್ ಗಳು, ಸ್ವೆಟರ್,ಶಾಲುಗಳು. ಊಟಕ್ಕೆ ಐತಾಳರಿಗೆ ಹೇಳಿ ಆಗಿದೆ.

'ನನಗೆ ಒಂದು ಗಂಟೆಯವರೆಗೂ ಕ್ಲಾಸಿದೆ ಅಪ್ಪ. ಮುಗಿಸಿಕೊಂಡು ಆದಷ್ಟು ಬೇಗ ಬರುತ್ತೇನೆ. ನೀವು ಸ್ವಲ್ಪ ಮುಂಚಿತವಾಗಿಯೇ ಅಲ್ಲಿರಿ.'

ಅಮ್ಮನ ನೆನಪಿನಲ್ಲಿ ಅವಳಿಗೆ ಸರಿಯಾಗಿ ಕ್ಲಾಸು ತೆಗೆದುಕೊಳ್ಳುವುದು ಆಗಲಿಲ್ಲ.

ನಾನೇಕೆ ಇಷ್ಟು ಭಾವುಕಳಾಗಿದ್ದೇನೆ? ತನಗೆ ತಾನೇ ಪ್ರಶ್ನಿಸಿಕೊಳ್ಳುತ್ತಿದ್ದಳು. ವೃದ್ಧಾಶ್ರಮ ತಲುಪಿದಾಗ ಒಂದೂವರೆ ಆಗಿತ್ತು. ಆಗಲೇ ಐತಾಳರ ಕಡೆಯ ಅಡುಗೆಯವರು ಊಟ ಬಡಿಸುತ್ತಿದ್ದರು. ಅಪ್ಪ ಅವರಿಗೆ ಉಪಚಾರ ಹೇಳುತ್ತಿದ್ದರು. ಸುಜಾತಳನ್ನು ನೋಡಿ ಪ್ರೆಸಿಡೆಂಟರು ಆದರದಿಂದ ಬರಮಾಡಿಕೊಂಡರು.

'ಸಾರಿ ಮೇಡಂ. ಇವರಿಗೆಲ್ಲ ಒಂದೂ ಗಂಟೆಗೆ ಊಟ ಮಾಡಿ ಅಭ್ಯಾಸ. ಹಾಗಾಗಿ ನಿಮಗೆ ಕಾಯದೆ ಪ್ರಾರಂಭಿಸಿಬಿಟ್ಟೆವು' 'ಪರವಾಗಿಲ್ಲ. ನಮ್ಮ ಉದ್ದೇಶವೂ ಅವರ ಸಂತೃಪ್ತಿಯೇ. ಬಹಳ ಒಳ್ಳೆಯದಾಯಿತು.'

'ಇವರ ಊಟದ ನಂತರ ಇಲ್ಲಿಯ ಸಿಬ್ಬಂದಿ ಎಲ್ಲರೂ ದಯವಿಟ್ಟು ಊಟಮಾಡಬೇಕು ಮೇಡಂ.'

'ಖಂಡಿತ. ಮೇಲೆ ಒಬ್ಬರು ಅತ್ಯಂತ ಹಿರಿಯ ವೃದ್ಧೆ ಇದ್ದಾರೆ. ಅವರ ಹೆಸರು ಕೂಡ ಶಾರದಮ್ಮ. ಇತ್ತೀಚೆಗೆ ದ್ರವಾಹಾರದ ಹೊರತು ಬೇರೇನೂ ತೆಗೆದುಕೊಳ್ಳುತ್ತಿಲ್ಲ ನಮ್ಮ ಸಿಬ್ಬಂದಿ ಸೂಪು ಕುಡಿಸುತ್ತಿದ್ದಾರೆ.'

'ಹೌದೇ? ನಮ್ಮ ತಾಯಿಯ ಹೆಸರಿನವರೆಂದರೆ ಈ ಶಾಲನ್ನು ನಾನೇ ಅವರಿಗೆ ಕೊಡಬೇಕು. ಅಲ್ಲಿಗೆ ಹೋಗೋಣ.'

ಸುಜಾತ ಒಂದು ಬೆಚ್ಚನೆಯ ಶಾಲನ್ನು ಹಿಡಿದು ಅವರೊಂದಿಗೆ ಮಹಡಿ ಏರಿದಳು. ಜೀರ್ಣಶೀರ್ಣವಾದ